ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಗೆ ಕಾರ್ಯನಿರ್ವಹಿಸಲು ಬಿಡುಗಡೆ ಮಾಡಿದೆ. ಈಗ ಮಂಡಲಿಯು ಕಾರ್ಯ ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳುತ್ತಿದೆ.

ಚೆನ್ನಪಟ್ಟಣ ತಾಲ್ಲೂಕಿನ ಕನ್ನಸಂದ್ರ ಗ್ರಾಮದಲ್ಲಿ ಇರುವ ಕೊಳವೆ ಬಾವಿಯ ಬಗ್ಗೆ

೯೯೧. ಶ್ರೀ ಸಿ. ಕಣ್ಣನ್ (ಶಾಂತಿನಗರ).—ಮಾನ್ಯ ಗ್ರಾಮೀಣಾಭಿವೃದ್ಧಿ, ವಸತಿ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚೆನ್ನಪಟ್ಟಣ ತಾಲ್ಲೂಕಿನ ಕನ್ನಸಂದ್ರ ಗ್ರಾಮದ ಪ್ರಜೆಗಳು ಕೊಳವೆ ಭಾವಿಯಿಂದ ನೀರು ಪಡೆಯುತ್ತಿದ್ದಾರೆ ಎಂಬುದು ನಿಜವೇ ?

ಆ) ಈಗಿರುವ ನಿಯಮದ ಪ್ರಕಾರ ಎರಡು ಕೊಳವೆ ಬಾವಿಗಳ ಮಧ್ಯ ೬೦೦ ಅಡಿ ಅಂತರ ಇರಬೇಕೆಂಬುದು ನಿಜವೇ ?

ಇ) ನೀರಾವರಿಗೋಸ್ಕರ ಒಂದು ಕೊಳವೆ ಬಾವಿ ಹಾಲಿ ಇರುವ ಕೊಳವೆಬಾವಿಯಿಂದ ೫೦ ಅಡಿ ಒಳಗೆ ಕೊರೆದು ಎಲೆಕ್ಟ್ರಿಕ್ ಮೋಟಾರ್ ಕೂಡ್ರಿಸಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಪ್ರಜೆಗಳ ಹಿತಾಸಕ್ತಿಯಲ್ಲಿ ಕೊಳವೆಬಾವಿಯನ್ನು ಮುಚ್ಚಲು ಶೀಘ್ರಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ, ವಸತಿ ಹಾಗೂ ವಕ್ಫ್ ಮಂತ್ರಿಗಳು).—

ಅ) ನಿಜ.

ಆ) ನಿಜ.

ಇ) ಕನ್ನಸಂದ್ರ ಗ್ರಾಮದ ಒಬ್ಬರು ಸ್ವಂತ ಜಮೀನಿನಲ್ಲಿ ನೀರಾವರಿಗೋಸ್ಕರ ಕೊಳವೆ ಬಾವಿಯನ್ನು ತೋಡಿಸಿದ್ದು ಅದು ಪಿಹೆಚ್‌ಇ ಕೊಳವೆ ಬಾವಿಯಿಂದ ಸುಮಾರು ೮೦ ಅಡಿ ದೂರವಲ್ಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ. ಆದರೆ ಈ ಕೊಳವೆ ಬಾವಿಗ ಇನ್ನೂ ಎಲೆಕ್ಟ್ರಿಕ್ ಮೋಟಾರ್ ಕೂಡ್ರಿಸಿರುವುದಿಲ್ಲ.

ಈ) ನಿಯಮಗಳಿಗನುಸಾರವಾಗಿ ಕ್ರಮ ತೆಗೆದು ಕೊಳ್ಳಲಾಗುವುದು.

ತುಮ್ಮನಕಟ್ಟೆ ಗ್ರಾಮಕ್ಕೆ ಕುಡಿಯುವ ನೀರು ಪೂರೈಸುವ ಬಗ್ಗೆ

೮೫೨. ಶ್ರೀ ಕೆ. ಬಿ. ಕೋಳಿವಾಡ (ರಾಣೆಬೆನ್ನೂರು) ಮಾನ್ಯ ಗ್ರಾಮೀಣಾಭಿವೃದ್ಧಿ, ವಸತಿ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಣೆಬೆನ್ನೂರು ತಾಲ್ಲೂಕಿನ ತುಮ್ಮನ ಕಟ್ಟೆ ಗ್ರಾಮಕ್ಕೆ ಕುಡಿಯುವ ನೀರು ಪೂರೈಸುವ ಯೋಜನೆಯಡಿಯಲ್ಲಿ ತುಂಗಭದ್ರಾ ನದಿಯ ನೀರನ್ನು ತರುವ ಕೆಲಸವು ಮುಗಿಯದೆ ಇರುವುದು ವಾಸ್ತವಿಕವೇ ?

ಆ) ಹಾಗಿದ್ದಲ್ಲಿ ನದಿಯ ದಡದ ಮೇಲೆ ಇನ್‌ಫಿಲ್‌ಟ್ರೇಶನ್ ಬಾವಿಯ ಕೆಲಸವನ್ನು ಪ್ರಾರಂಭಿಸದೆ ಇರಲು ಕಾರಣವೇನು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ, ವಸತಿ ಮತ್ತು ವಕ್ಫ್ ಮಂತ್ರಿಗಳು).—

ಅ) ಹೌದು

ಆ) ನದಿಯಲ್ಲಿ ಪ್ರವಾಹ ಬಂದಿದ್ದರ ಕಾರಣ ಮತ್ತು ತಳಹದಿಯ ಸಮಸ್ಯೆಯಿಂದ ಇನ್‌ಫಿಲ್‌ಟ್ರೇಶನ್ ಬಾವಿಯ ಕೆಲಸವನ್ನು ತೆಗೆದುಕೊಳ್ಳಲು ತಡವಾಯಿತು. ಆದರೂ ನೀರಾವರಿ ಪಂಪ್‌ಮಾಡಿ ನೀರು ಸರಬರಾಜು ಮಾಡಲಾಗುತ್ತಿದೆ. ಬಾವಿಯ ಕೆಲಸವನ್ನು ಕೂಡಲೇ ತೆಗೆದುಕೊಳ್ಳಲಾಗುವುದು